ಕರೆಸಿಕೊಂಡು ತೆಪ್ಪದಲ್ಲಿ ಕೂತ್ಕಂಡು ಹೆಣಗಳ ಹತ್ತಿರಕ್ಕೆ ಹೋಗಿ ಅವಕ್ಕೆ ಹಗ್ಗ ಕಟ್ಟಿ ಎಳಕೊಂಡು ಬರಲು ಯಾರನ್ನು ಕಳಿಸೋದು ಅಂತ ಕೇಳಿದರು. ಈ ಪ್ರಶ್ನೆಗೆ ಯಾರೂ ಉತ್ತರ ಹೇಳಲಿಲ್ಲ.

‘ಹೆಣಗಳನ್ನು ಕೆರೆಯಿಂದ ಹೊರಕ್ಕೆ ಎಳೆಸಿ ಹಾಕೋದು ಪೊಲೀಸರ ಕೆಲಸ. ತೆಪ್ಪದಲ್ಲಿ ಕುಂತು ಹೆಣಗಳ ಹತ್ತಿರಕ್ಕೆ ಹೋಗಿ ಅವನ್ನು ಎಳಕಂಡು ಬರ್ರಿ ಅಂತ ನೀವು ಹೇಳಿದ್ರೂ ಯಾರೂ ಹೋಗಲ್ಲ. ನಾವು ಯಾಕೆ ಹೋಗಬೇಕು ಅಂತ ಕೇಳ್ತಾರೆ... ಹೆಣಗಳನ್ನು ಎಳಕಂಡು ಬರೋ ಧೈರ್ಯ ನಮ್ಮೂರವರಿಗೆ ಇಲ್ಲ ಅಂತ ಪೊಲೀಸರಿಗೆ ಹೇಳಿಬಿಡ್ರಿ. ನಾಳೆ ನೀವು ಕೆರೆಯ ಹತ್ರಕ್ಕೆ ಬರಲೇಬೇಡಿ. ಏನಾದರೂ ನೆಪ ಹೇಳಿ ಮನೆಯಲ್ಲೇ ಇರ್ರಿ... ಹೆಣ ಎತ್ತಲ್ಲ ಅಂತ ಪೊಲೀಸರು ಅದೆಂಗೆ ಹೇಳ್ತರೊ ನೋಡನ. ಅವರು ಹಂಗೆ ಹೇಳಿದ್ರೆ ಎಂಎಲ್ಲೆ ಸಾಹೇಬರಿಗೊ ಅಥವಾ ಜಿಲ್ಲಾ ಮಂತ್ರಿಗಳಿಗೊ ಫೋನ್ ಮಾಡಿದರಾಯ್ತು. ಹೆಣಗಳು ಬಿದ್ದು ನಾಳೆಗೆ ಮೂರು ದಿನ ಆಗುತ್ತೆ. ಅವನ್ನು ಎತ್ತೋದು ಇನ್ನೂ ಒಂದು ದಿನ ತಡ ಆದ್ರೆ ಏನೂ ಕೊಳ್ಳೆಹೋಗಲ್ಲ. ಹೆಣಗಳನ್ನು ಎತ್ತಿಸಿದ ಮೇಲೆ ಕೆರೆಯನ್ನು ಶುದ್ಧಿ ಮಾಡಿಸಿ, ಗಂಗಮ್ಮನ ಪೂಜೆ ಮಾಡೋದು ಇದ್ದೇ ಇದೆಯಲ್ಲ. 15–20 ದಿನ ನೀರು ಬಳಸೋದೇ ಬೇಡ’ ಅನ್ನುವ ಸಲಹೆಯನ್ನು ಅವರ ಬೆಂಬಲಿಗನೊಬ್ಬ ನೀಡಿದ.

‘ಈ ಉಸಾಬರಿ ಸಾಕು ಅನ್ನಿಸಿದೆ... ಊರು ಜಾತಿಗಳ ಮೇಲೆ ಒಡೆದು ಗಬ್ಬೆದ್ದು ಹೋಗಿದೆ. ಯಾರ ಮಾತನ್ನು ಯಾರೂ ಕೇಳಲ್ಲ. ಒಬಿಸಿ ಜಾತಿಗಳ ಹುಡುಗರಂತೂ ಊರಿಗೂ ನಮಗೂ ಸಂಬಂಧವೇ ಇಲ್ಲ ಅನ್ನಂಗೆ ಇದಾರೆ. ಅದನ್ನವರು ಬಾಯಿ ಬಿಟ್ಟು ಹೇಳಲ್ಲ ಅಷ್ಟೇ. ಏನು ಮಾಡಬೇಕು ಅಂಬದು ನಂಗೆ ಗೊತ್ತಾಗ್ತ ಇಲ್ಲ... ಈ ಚೇರ್ಮನ್‌ಗಿರಿ ಸಾಕಾಗಿದೆ’ ಅಂತ ಹೇಳಿ ಬೇಸರ ಹೊರ ಹಾಕಿದರು.

